ಮನಸ್ಸಲ್ಲಿದ್ದ ಇವರೆಲ್ಲ ರಾಗುವನ್ನು ಹಣಿಯಲು ಸಾಧ್ಯವೇ ಇಲ್ಲ' ಎಂದು ತನ್ನನ್ನೇ ಸಂತೈಸಿಕೊಂಡು ನಿರುಮ್ಮಳನಾಗಲು ಯತ್ನಿಸುತ್ತಿದ್ದ.

ಕಷ್ಟ ಅಂತ ಹೋದಾಗೆಲ್ಲ ನಾಲ್ಕು ಕಾಸು ಕೈಯಲ್ಲಿ ತುರುಕುತ್ತಿದ್ದ ಅಶ್ವತಣ್ಣನ ಅಂಗಡಿಗೂ ಕಲ್ಲೆಸೆದೆನಲ್ಲ, ಬರೀ ಕಣ್ಣಲ್ಲೇ ನಗುವ ಹುಡುಗಿಯ ಮೇಲೆ ಪ್ರೀತಿಯೇ ಇದ್ದಿರಬಹುದು ಎಂಬಂತಹ ಭಾವನೆ ಚಿಗುರಿ ಏನೇನೋ ಮಾಡಿಕೊಂಡುಬಿಟ್ಟೆ! ಹಾಳು ಹುಡುಗಿ, ಮನೆ ಸೇರುವ ಮೊದಲೇ ಮಾಡಬಾರದ್ದನ್ನೆಲ್ಲ ಕೈಲಿ ಮಾಡಿಸಿಬಿಟ್ಟಳು ಎನ್ನಿಸಿದ ಮರುಕ್ಷಣವೇ, ಪಾಪದ ಹುಡುಗಿ ಅವಳೇನು ದ್ವೇಷ ತೀರಿಸಿಕೋ ಎಂದು ಆಹ್ವಾನ ಕೊಟ್ಟಳೇ ಎಂದು ಮರುಕ್ಷಣವೇ ಮರುಕವೂ ಆಯ್ತು ಮಹೇಶನಿಗೆ.

ತರಗೆಲೆಯಂತೆ ಹೆಜ್ಜೆಹಾಕುತ್ತಿದ್ದ ಮಹೇಶನ ಎದುರಾಗಿ ದೊಡ್ಡ ದಂಡೇ ಹುಯಿಲು ಹಾಕುತ್ತ ಬರುತ್ತಿತ್ತು. ಕುಮಟೆ ಪೇಟೆಯಲ್ಲಿ ಗಲಾಟೆ ಎಂದು ಚಿತ್ರಿಗಿ ಹಾದು ಬರುವವರಿಗಿಂತ ಹಳ್ಕಾರಿನ ಒಳದಾರಿಯೇ ಇವತ್ತು ಎಲ್ಲರಿಗೂ ಬಲವೆನಿಸಿರಬಹುದು.

'ನಮ್ ರಾಗು ಮೈ ಮುಟ್ಟಿದವ ಯಾರು ಹೇಳಿ ತಿಳೀಲಿ ಮೊದ್ಲು, ಇದ್ದಲ್ಲೆ ಶಿಗಿದು ಹಾಕಲಿಲ್ಲಾದ್ರೆ ಕೇಳು. ನನ್ನ ಕೇಳಿದ್ರೆ ಹೊಡೆದವರು ಕುಮ್ಟೆ ಬದಿಯವ್ರು ಅಲ್ಲಾಗಿರೂರು, ಇಲ್ಲಿಯವ್ರಿಗೆ ರಾಗು ಮುಟ್ಟು ಧೈರ್ಯ ಯಾರಿಗದೆ' ಎಂದು ಮೈಮೇಲೆ ಬಂದವರಂತೆ ಬೊಬ್ಬೆಯಿಡುತ್ತಾ ಗುಂಪು ಹೋಗುತ್ತಿರುವುದು ಕಾಣುತ್ತಲೇ ಮಹೇಶನಿಗೆ ಕಣ್ಣಿಗೆ ಕತ್ಲೆ ಬಂದಂತೆ ಎಲ್ಲವೂ ಶೂನ್ಯವಾಯಿತು.

ಅಂದ್ರೆ ರಾಗೂಗೆ ಹೊಡ್ತ ಹಾಕಿದ್ದು ಹೌದು ಹೇಳಾಯ್ತು!! ರಾಗೂ ಹಿಡ್ಸಿ ಹೊಡೆಸಿದ್ದು ನಾನು ಅಂತ ಯಾರಿಗಾದ್ರೂ ಗೊತ್ತಾದ್ರೆ ನನಗೆ ಇರ್ಗತಿ ಅದ್ಯಾ! ಹಾಳುಬಿದ್ದ ಬಾಬು... ಸತ್ಯಾನಾಶ ಆಗಿ ಹೋಗಲಿ ಅಂವ, ಅವನಂಗಡಿಯ ಕೊಟ್ಟೆಯಲ್ಲೇ ಏನೋ ಧೋಖಾ ಇದೆ ಇಲ್ಲದಿದ್ದರೆ ನಾನೆಲ್ಲ ಹೀಗೆ ಮಾಡುವವನೇ ಅಲ್ಲ. ಅಯ್ಯೋ... ಅಲ್ಲ ಅಲ್ಲ ಮೋಸವಾಗಿದ್ದು ಪಾಚು, ರಾಚ, ಮೆಸ್ತನಿಂದ!!

ನಾನು ಬಂದರೆ ಮಾತ್ರ ರಾಗುವಿನ ಮೈಮುಟ್ಟುವುದು ಎಂದು ಖಂಡತುಂಡಾಗಿ ಹೇಳಿಬಿಡಬೇಕಿತ್ತು ಅವರಿಗೆ. ನನ್ನನ್ನು ಸಿಲುಕಿಸಬೇಕೆಂದೇ ಅವರು ರಾಗುವಿಗೆ ಸಾಯುವಂತೆ ಹೊಡೆದಿದ್ದಿರಲೂಬಹುದು. ಅಥವಾ ನನ್ನನ್ನು ಕೆಟ್ಟವನನ್ನಾಗಿಸಿ ಸುಜಾತಾಳ ಪ್ರೀತಿ ಪಡೆಯುವ ದುರಾಸೆ ರಾಚನಿಗೆ ಬಂದಿರಲೇಬೇಕು!! ಯಾರೂ ಸರಿಯಿಲ್ಲ ಎನ್ನಿಸಿ ಮಹೇಶನಿಗೆ ಎಲ್ಲರ ಮೇಲೂ ಗುಮಾನಿ ಹುಟ್ಟತೊಡಗಿತು, ರಾಗುವನ್ನು ಹಣಿಯಲೆಂದೇ ತೋಡಿದ ಗುಂಡಿಯಲ್ಲಿ ತಾನಾಗಿ ಬಂದು ಬಿದ್ದ ಅನುಭವವಾಗಿ ಅದೇ ಸರಿಯೆನ್ನಿಸತೊಡಗಿತು.

ಯಾರಿಗಾಗೋ ನೇಯ್ದ ಗಳಪಾಸ ಎಲ್ಲಾ ಹೋಗಿ ತನ್ನನ್ನೇ ಸುತ್ತಿ ಕುತ್ತಿಗೆಯಿಂದ ಹಿಡಿದು ಇಡೀ ಮೈಯಮ್ಮೆಲ್ಲ ಬಿಗಿದು ಆವರಿಸಿ, ತನ್ನ ಉಸಿರನ್ನೇ ನಿಲ್ಲಿಸಿಬಿಡುತ್ತದೆಯೆಂಬ ಭಯವಾಗಿ ದಾರಿ ಕಂಡಲ್ಲೆಲ್ಲ ತಲೆಕೆಟ್ಟವರಂತೆ ಓಡತೊಡಗಿದ ಮಹೇಶ.

## ಛಾಯಾ ಭಟ್

ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಲೇಖಕಿ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದಿದ್ದಾರೆ. ಕತೆ, ಲೇಖನಗಳು ಕನ್ನಡದ ದೈನಿಕ ಹಾಗೂ ವಾರಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಮೂಲತಃ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನವರು.